GULBARGA UNIVERSITY
"Jnana Ganga", GULBARGA - 585 106,
Karnataka, India.
☎ 08472-263202
Fax. 08472-263206
E-Mail: registrargug@rediffmail.com

ಸಂ: ಗುವಿಗು/ವಿಮವಿ/ಪಿಜಿ–I/2017–18/ 1615 ದಿನಾಂಕ: 1/9/17

## ಸುತ್ತೋಲೆ

ವಿಷಯ: 2017–18ನೇ ಸಾಲಿಗಾಗಿ ಖಾಸಗಿ ಮಹಾವಿದ್ಯಾಲಯಗಳಲ್ಲಿನ ವಿವಿಧ ಸ್ನಾತಕೋತ್ತರ ಕೋರ್ಸುಗಳ ಆಡಳಿತ ಮಂಡಳಿ ಕೋಟಾದ ಸೀಟುಗಳನ್ನು ಭರ್ತಿ ಮಾಡುವ ಕುರಿತು.

ಉಲ್ಲೇಖ: 1) ಈ ಕಛೇರಿ ಪ್ರವೇಶಾತಿ ಅಧಿಸೂಚನೆ GUG/ACA/PG-I/2017–18/312 ದಿನಾಂಕ: 02.06.2017.
2) ಈ ಕಛೇರಿ ಪ್ರವೇಶಾತಿ ಅಧಿಸೂಚನೆ ಸಂಖ್ಯೆ: GUK/ACA/PG-I/2017–18/1488 ದಿನಾಂಕ: 19.08.2017.
3) ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ಸಂಖ್ಯೆ: 20 ದಿನಾಂಕ: 16.08.2017.
4) ಸಿಂಡಿಕೇಟ್ ಸಭೆಯ ನಿರ್ಣಯ ದಿನಾಂಕ: 18.08.2017.
5) ಕುಲಪತಿಗಳ ಅನುಮೋದನೆ ದಿನಾಂಕ: 31.08.2017.

****

ಗುಲಬರ್ಗಾ ವಿಶ್ವವಿದ್ಯಾಲಯ ಅಧೀನದಲ್ಲಿ ಬರುವ ಸ್ನಾತಕೋತ್ತರ ಕೋರ್ಸುಗಳನ್ನು ಹೊಂದಿರುವ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ ಈ ಮೂಲಕ ತಿಳಿಸುವುದೇನೆಂದರೆ, ದಿನಾಂಕ 16 ಹಾಗೂ 18.08.2017 ರಂದು ಕ್ರಮವಾಗಿ ಜರುಗಿದ ವಿದ್ಯಾವಿಷಯಕ ಪರಿಷತ್ ಹಾಗೂ ಸಿಂಡಿಕೇಟ್ ಸಭೆಯ ನಿರ್ಣಯ ಹಾಗೂ ಮಾನ್ಯ ಕುಲಪತಿಗಳ ನಿರ್ದೇಶನದಂತೆ, 2017–18ನೇ ಸಾಲಿನಲ್ಲಿ ತಮ್ಮ ಮಹಾವಿದ್ಯಾಲಯದ ವಿವಿಧ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿಯಲ್ಲಿ ವಿಶ್ವವಿದ್ಯಾಲಯದ ಕೋಟಾದ ಅಡಿಯಲ್ಲಿ ವಿದ್ಯಾರ್ಥಿಗಳನ್ನು ಹಂಚಿಕೆ ಮಾಡಿ ಕಳುಹಿಸಿಕೊಡಲಾಗಿದೆ. ಅದರಂತೆ, ಆಡಳಿತ ಮಂಡಳಿಗೆ ಸಂಬಂಧಿಸಿರುವ ಸೀಟುಗಳನ್ನು ಭರ್ತಿ ಮಾಡಬೇಕಾದಲ್ಲಿ, ಈಗಾಗಲೇ ಹೊರಡಿಸಲಾದ ಎಲ್ಲಾ ಮಾರ್ಗದರ್ಶಿ ನಿಯಮಗಳನ್ನು ಯಥಾವತ್ತಾಗಿ ಪಾಲಿಸುವುದರ ಜೊತೆಗೆ, ಉಲ್ಲೇಖಿತ ಅಧಿಸೂಚನೆಗಳನ್ವಯ ಅರ್ಜಿಸಲ್ಲಿಸದ ಹಾಗೂ ಪ್ರವೇಶ ಪರೀಕ್ಷೆಗೆ ಹಾಜರಾಗದಿರುವ ವಿದ್ಯಾರ್ಥಿಗಳಿಗಾಗಿ ತಮ್ಮ ಮಹಾವಿದ್ಯಾಲಯದಿಂದ ಪ್ರತ್ಯೇಕವಾಗಿ ವಿಶ್ವವಿದ್ಯಾಲಯದ ನಿಯಮಾನುಸಾರ, ಪ್ರವೇಶ ಪರೀಕ್ಷೆ ನಿಗದಿಪಡಿಸಿರುವ ಕೋರ್ಸುಗಳಿಗೆ ಕಡ್ಡಾಯವಾಗಿ ಪ್ರವೇಶ ಪರೀಕ್ಷೆಗಳನ್ನು ಜರುಗಿಸಿ, ಅರ್ಹ ಅಭ್ಯರ್ಥಿಗಳಿಗೆ ಆಡಳಿತ ಮಂಡಳಿಯ ಕೋಟಾದ ಅಡಿಯಲ್ಲಿ ಪ್ರವೇಶಾತಿ ನೀಡತಕ್ಕದ್ದು. ಸದರಿ ಪ್ರಕ್ರಿಯೆಯನ್ನು ಪೂರೈಸಿ ದಿನಾಂಕ 08.09.2017 ರೊಳಗಾಗಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಎಲ್ಲಾ ದಾಖಲಾತಿ ಹಾಗೂ ನಿಗದಿತ ಶುಲ್ಕದೊಂದಿಗೆ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಮುಂದುವರೆದು, ಉಲ್ಲೇಖಿತ ಪ್ರವೇಶಾತಿ ಅಧಿಸೂಚನೆಗಳನ್ವಯ ನಿಗದಿಪಡಿಸಲಾಗಿರುವ ಇತರ ಎಲ್ಲಾ ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸಲು ತಿಳಿಸಲಾಗಿದೆ ಹಾಗೂ ಈ ರೀತಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯಲ್ಲಿ ಹಾಜರಾತಿ ಕೊರತೆ ಆಗದಂತೆ ಪ್ರಾಂಶುಪಾಲರು ಅಗತ್ಯ ಕ್ರಮಕೈಗೊಳ್ಳುವ ಷರತ್ತಿನೊಂದಿಗೆ ಅನುಮತಿಸಲಾಗಿದೆ.

ಕುಲಸಚಿವರು 1/9/17
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಗೆ,
ಸ್ನಾತಕೋತ್ತರ ಕೋರ್ಸುಗಳನ್ನು ಹೊಂದಿರುವ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ.

D:\ACA Branch\ACA Ph.D(Kannada) (C-3)1